ಕಡಿಮೆಯಾಗಿರುವುದೇನೋ ನಿಜ. ಆದರೆ ತೀರಾ ನಿರಾಶರಾಗಬೇಕಿಲ್ಲ. ನಮ್ಮ ಪ್ರಯತ್ನವನ್ನು ನಾವು ಕರ್ತವ್ಯ ಎಂದು ಮಾಡುತ್ತಿರಬೇಕು. ನಮ್ಮ ಪ್ರಾಚೀನರು ಕೂಡ ಇದನ್ನು ಕರ್ತವ್ಯ ಎಂದೇ ಮಾಡುತ್ತಿದ್ದರು.

ಕಷ್ಟಪರಂಪರೆಯಲ್ಲಿ ಬೆಳೆದುಬಂದವರಿಗೆ ಒಂದು ಪದವಿ ಸಿಗುತ್ತಿದ್ದಂತೆಯೇ ಉದ್ಯೋಗ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಉದ್ಯೋಗಕ್ಕೆ ಸೇರಿಕೊಂಡ ಮೇಲೆ ಅಲ್ಲಿನ ಪರಿಸ್ಥಿತಿಗೆ ಇವರು ಹೊಂದಿಕೊಳ್ಳಬೇಕು. ಇಂಥ ಕಾರಣಗಳಿಂದ ಅಧ್ಯಯನ ಕಡಿಮೆ ಆಗಿರುವುದಂತೂ ನಿಜವೇ.

◆ **ಸಂಶೋಧನೆ, ಸಾಹಿತ್ಯ, ಸಾಂಸ್ಕೃತಿಕ ಅಧ್ಯಯನಗಳ ಜಾಗೃತಕೇಂದ್ರಗಳಾಗಬೇಕಿದ್ದ ವಿಶ್ವವಿದ್ಯಾಲಯಗಳು ಬೇರೆಯದೇ ವಿಷಯಗಳಿಗೆ ಸುದ್ದಿ ಮಾಡುತ್ತಿವೆ. ಈ ಪರಿಸ್ಥಿತಿಗೆ ಕಾರಣ ಏನು?**

ನಮ್ಮಲ್ಲಿ ಇಂದು ಶಿಕ್ಷಣಸಂಸ್ಥೆಗಳು ಗುಣಮಟ್ಟ ಕಾಯ್ದುಕೊಳ್ಳುತ್ತಿವೆ ಎಂದು ನನಗೆ ಅನಿಸುತ್ತಿಲ್ಲ. ನೂರು ಮಾರ್ಕ್ಸ್ ತೆಗೆದ ಎಂದಾಕ್ಷಣ ಮುಗಿಯಿತೇ? ಪಠ್ಯದ ಆಚೆಯ ಜ್ಞಾನವೂ ಬರಬೇಕಲ್ಲವೇ? ಬೇರೇ ಗಟ್ಟಿ ಇಲ್ಲದಿರುವಾಗ, ರೆಂಬೆಕೊಂಬೆಗಳು ಗಟ್ಟಿಯಾಗಬೇಕು ಎಂದರೆ ಸಾಧ್ಯವಿಲ್ಲ. ಒಂದನೇ ತರಗತಿಯಿಂದಲೇ ಶಿಕ್ಷಣ ಗಟ್ಟಿಯಾಗಬೇಕು. ಮಾತೃಭಾಷೆಯಲ್ಲಿಯೇ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಂತಾಗಬೇಕು. ಬೇರಿನಲ್ಲೇ ದೋಷವಿದೆ.

ಹಿಂದೆ ಮೈಸೂರು ಸರ್ಕಾರ ಇದ್ದಾಗ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ, ನರಹರಿ ಜಯರಾಯಾಚಾರ್ಯರು, ಎಫ್.ಜಿ. ನರಸಿಂಹಾಚಾರ್ಯರು, ಹಟ್ಟಿಯಂಗಡಿ ನಾರಾಯಣರಾಯರು, ಪಂಜೆ ಮಂಗೇಶರಾಯರು ಇವರೆಲ್ಲ ತುಂಬ ಸೊಗಸಾಗಿ ಮಕ್ಕಳ ಮನಸ್ಸಿಗೆ ನಾಟುವ ರೀತಿಯಲ್ಲಿ ಪದ್ಯಗಳನ್ನು ಬರೆಯುತ್ತಿದ್ದರು. ಈಗ ಆ ರೀತಿಯ ಪದ್ಯಗಳನ್ನು ನಿರೀಕ್ಷೆ ಮಾಡಲಾಗುತ್ತದೆಯೇ? ಚಾ. ವಾಸುದೇವಾಚಾರ್ಯರ 'ಬಾಲಬೋಧೆ' ಎಂಬ ಕೃತಿ ಎಷ್ಟು ಜನಪ್ರಿಯವಾಗಿತ್ತು. ಅಂಥ ಕೃತಿಯನ್ನು ಈಗ ನಿರೀಕ್ಷಿಸಲಾಗುತ್ತದೆಯೇ? ಪ್ರತಿ ಶನಿವಾರ ಶಾಲೆಗಳಲ್ಲಿ ಉಕ್ತಲೇಖನ ಪದ್ಧತಿ ಎಂದು ಇರುತ್ತಿತ್ತು. ಈಗ ಆ ಪದ್ಧತಿ ಇದೆಯೇ? ಒಳ್ಳೆಯ ಪದ್ಧತಿಗಳು ನಮ್ಮ ವಿದೇಶಿ ಸಂಸ್ಕೃತಿಯೋ ಅಥವಾ ನಮ್ಮ ದಡ್ಡತನದಿಂದಲೋ ಮರೆಯಾಗುತ್ತಿವೆ. ಪ್ರಾಥಮಿಕ ಹಂತದಲ್ಲಿಯೇ ಗುಣಮಟ್ಟ ಕುಸಿದಾಗ ಪ್ರೌಢಹಂತದ ವಿದ್ಯಾಭ್ಯಾಸದಲ್ಲಿ ಸಹಜವಾಗಿಯೇ ಅದು ಪರಿಣಾಮ ಬೀರುತ್ತದೆ.

ಗುಣಮಟ್ಟದ ವಿಷಯ ಬಂದಾಗ ಆಯ್ಕೆಯ ಮಾನದಂಡಗಳೂ ಮುಖ್ಯ. ಆಯ್ಕೆ ಎನ್ನುವುದು ಜಾತಿ–ಧರ್ಮಾಧಾರಿತವಾದಾಗ ಅದು ಸಹಜವಾಗಿಯೇ ತಪ್ಪುಗಳಿಗೆ ಕಾರಣವಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಆಯ್ಕೆಯ ಮಾನದಂಡಗಳೇನು ಎಂದು ಯೋಚಿಸಿದರೆ ಅದು ಮೇಲ್ವರ್ಗ ಕೆಳವರ್ಗ ಎಂದು ಬ್ರಿಟಿಷರು ಸೃಷ್ಟಿಸಿದ ವಿಷಜಾಲಕ್ಕೆ ಬಂದು ನಿಲ್ಲುತ್ತದೆ. ಆದರೆ ನಿಜವಾಗಲೂ ಆಯ್ಕೆಯ ಮಾನದಂಡವನ್ನು ಸರಿಯಾಗಿಟ್ಟುಕೊಂಡರೆ ತಾನೆ ಗುಣಮಟ್ಟ ಕಾಯ್ದುಕೊಳ್ಳೋಕೆ ಸಾಧ್ಯ? ಈ ಎಲ್ಲ ಚರ್ಚೆ ಮಾಡಿದರೆ ಅದು ಬೇರೆಯೇ ಅರ್ಥ ಪಡೆದುಕೊಳ್ಳುತ್ತದೆ. ಹಾಗಾಗಿ ಈ ಎಲ್ಲವೂ ವಸ್ತುನಿಷ್ಠವಾಗಿ ಇಲ್ಲ ಎಂದು ನನ್ನ ಖಚಿತ ಅಭಿಪ್ರಾಯ.

◆ **ನಮ್ಮಲ್ಲಿರುವ ಎಷ್ಟೋ ಸಂಶೋಧಕರು ಯಾವುದೋ ಒಂದು ಪಂಥ–ಸಿದ್ಧಾಂತದ ಬಂಧನದೊಳಗೆ ಸಿಕ್ಕಿಕೊಂಡಿರುವುದು ಕಾಣುತ್ತದೆ. ಒಬ್ಬ ಸಂಶೋಧಕನಿಗೆ ಈ ಥರದ ಪಂಥ ಸಿದ್ಧಾಂತಗಳಿಗೆ ಸಿಲುಕಿಕೊಳ್ಳುವ ಅಪಾಯಗಳು ಏನು ಎಂದು ಅನಿಸುತ್ತದೆ ನಿಮಗೆ?**